**ದಿನಾಂಕಃ 08.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ**

ಸರ್ವೇ ನಂ.65 ರಲ್ಲಿ ಒಟ್ಟು 35 ಎಕರೆ ಜಾಗ ಇರಬಹುದು. ಸರ್ವೇ ನಂ.65 ರಲ್ಲಿ ನಮ್ಮ ತಂದೆ ಹನುಮಯ್ಯ ರವರಿಗೆ ಭೂಮಿ ಮಂಜೂರಾಗಿರುತ್ತದೆ. ನಮ್ಮ ತಂದೆಯವರು 1996 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಮ್ಮ ತಂದೆಗೆ 4 ಜನ ಮಕ್ಕಳು ಹಾಗೂ ನಮ್ಮ ತಾಯಿ ಹೆಸರು ಪಿಳ್ಳಮ್ಮ. ನಮ್ಮ ತಂದೆ ಮರಣದ ಮೊದಲು ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದರು ಅವರ ಮರಣದ ನಂತರ ನನ್ನ ಹೆಸರಿಗೆ ಖಾತೆಯಾಗಿರುತ್ತದೆ. ಸರ್ವೇ ನಂ.65 ರಲ್ಲಿ ನರಸಮ್ಮ ಕೋಂ ಹನುಮಯ್ಯನವರ ಜಮೀನೂ ಸಹ ಇರುತ್ತದೆಂದರೆ ಸರಿ. 2 ನೇ ಪ್ರತಿವಾದಿಯ ಸ್ವತ್ತು ನನ್ನ ಸ್ವತ್ತಿನ ದಕ್ಷಿಣದ ಕಡೆ ಇರುತ್ತದೆ. ದಾವಾಸ್ವತ್ತಿನ ಪೂರ್ವಕ್ಕೆ ದಯಾನಂದರವರ ಸ್ವತ್ತು, ಪಶ್ಚಿಮಕ್ಕೆ ಜನತಾ ಕಾಲೋನಿ, ಉತ್ತರಕ್ಕೆ ದೊಡ್ಡಮುನಿಯಪ್ಪ ಹಾಗೂ ರಾಮಕೃಷ್ಣರವರ ಸ್ವತ್ತು, ದಕ್ಷಿಣಕ್ಕೆ 2 ನೇ ಪ್ರತಿವಾದಿಯ ಸ್ವತ್ತು ಇರುತ್ತದೆ. ನನ್ನ ದಕ್ಷಿಣಕ್ಕೆ ಸರ್ವೇ ನಂ.164 ಇರುತ್ತದೆ. ಸರ್ವೇ ನಂ.161 ಬರುವುದಿಲ್ಲ. ಎರಡು ಸರ್ವೇ ನಂ. ಗಳನ್ನು ಒಬ್ಬರೇ ಖರೀದಿ ಮಾಡಿರುವ ಕಾರಣಕ್ಕೆ ಸರ್ವೇ ನಂ.161 ರ ಹೆಸರನ್ನು ತೋರಿಸಿರುತ್ತೇನೆ.

1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿಯ ಇಬ್ಬರು ಸೇರಿ ಯಾವ ರೀತಿಯಿಂದ ನನಗೆ ಮೋಸ ಮಾಡಿ ದಾವಾಸ್ವತ್ತಿನ ಬಿ ಶೆಡ್ಯೂಲ್ ಆಸ್ತಿಯನ್ನು ದಿ.19.02.2021 ರಂದು ಖರೀದಿ ಮಾಡಿರುತ್ತಾರೆಂದರೆ ಬಿ ಶೆಡ್ಯೂಲ್ ಸ್ವತ್ತಿನ ಸ್ವಾ ಧೀನದಲ್ಲಿ ನಾನು ಇದ್ದು ನನಗೆ ಯಾವುದೇ ನೋಟಿಸ್ ನೀಡಿದೆ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ದಾವಾಸ್ವತ್ತಿ ಬಿ ಶೆಡ್ಯೂಲ್ ಆಸ್ತಿ ನನಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ಆಸ್ತಿಯ ಸ್ವಾ ಧೀನದಲ್ಲಿ ನಾನು ಇದ್ದೇನೆಂದು ತೋರಿಸಲು ಯಾವುದೇ ದಾಖಲೆಗಳು ಹಾಜರುಪಡಿಸಿರುವುದಿಲ್ಲ. ನಾನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಸದರಿ ಸ್ವತ್ತಿನ ಸ್ವಾ ಧೀನದಲ್ಲಿ ಇದ್ದೇನೆಂದು ತಿಳಿಸಿರುತ್ತೇನೆ. ದಾವಾಸ್ವತ್ತಿನ ಬಿ ಶೆಡ್ಯೂಲ್ ನಮೂದಿಸಿದಂತೆ ಹಳೆ ಸರ್ವೇ ನಂ.65/ಪಿ-14 ಎಂಬ ಸರ್ವೇ ನಂ.164 ರನ್ನಾಗಿ ಹೊಸದಾಗಿ ಮಾಡಿದ ಬಗ್ಗೆ ಪ್ರತಿವಾದಿಯರು ಕಂಪೌಂಡ್ ಹಾಕಲು ಸಲುವಾಗಿ ಠಾಣೆಗೆ ಹೋದಾಗ ನನಗೆ ತಿಳಿಸಿರುತ್ತಾರೆ. ದಿ.31.07.2019 ರಂದು ಸರ್ವೇ ನಂ.65/ಪಿ-14 ಎಂಬ ಸರ್ವೇ ನಂ.164 ರನ್ನಾಗಿ

ಪೋಡಿ ಮಾಡಲಾದ ಬಗ್ಗೆ ನನಗ ಗೊತ್ತಿರುವುದಿಲ್ಲ. ಸರ್ವೇ ನಂ.161 ದಿ.13.01.1999 ರಲ್ಲಿ ಪೋಡಿಯಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಿ.21.03.2021 ರಂದು ಪ್ರತಿವಾದಿಯರು ಕಂಪೌಂಡ್ ಹಾಕಲು ಬಂದಾಗ ಪೋಡಿಯಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ದಿ.21.03.2021 ರಿಂದ ಇವತ್ತಿನ ದಿನದ ವರೆಗೂ ಪೋಡಿ ಮಾಡಿದ ಬಗ್ಗೆ ತಿಳಿಸಿದೆ ಮಾಡಿರುತ್ತೀರಿ ಎಂದು ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ದಿ.22.11.1993 ರಂದು ಸೈಯದ್ ಖಲೀಲ್ ಎಂಬುವವರಿಗೆ ಹಳೆ ಸರ್ವೇ ನಂ.65/ಪಿ-14 ಹಾಗೂ ಹೊಸ ಸರ್ವೇ ನಂ.164 ರಲ್ಲಿ 1 ಎಕರೆ 20 ಗುಂಟೆ ಜಾಗ ಮಂಜೂರಾತಿಯಾಗಿರುತ್ತದೆಂದರೆ ಸರಿ, ಆದರೆ ಸ್ವಾ ಧೀನದಲ್ಲಿ ನಾನು ಇದ್ದೇ. ದಿ.01.06.2006 ರಂದು ಸೈಯದ್ ಖಲೀಲ್ ರವರು ಅವರಿಗೆ ಮಂಜೂರಾದ ಸ್ವತ್ತನ್ನು ಹನುಮಂತೇಗೌಡರಿಗೆ ಮಾರಾಟ ಮಾಡಿದ ಬಗ್ಗೆ ತಿಳಿದ್ದೀಯಾ ಎಂದರೆ ಸಾಕ್ಷಿಯು ಮಾರಾಟ ಮಾಡಿದ ಬ್ಗಗೆ ಹನುವಂತೇಗೌಡರು ಸ್ವತ್ತಿಗೆ ಬಂದು ಕಂಪೌಂಡ್ ಹಾಕಲು ಬಂದ ಸಮಯಕ್ಕೆ ತಿಳಿದಿರುತ್ತದೆ. ಸ್ವಾಧೀನದಲ್ಲಿ ನಾನೇ ಇರುತ್ತೇನೆ. ಸರ್ವೇ ನಂ.164 ರಲ್ಲಿ 15-20 ಗುಂಟೆ ಸ್ವಾ ಧೀನದಲ್ಲಿ ನಾನೇ ಇರುತ್ತೇನೆ. ದಿ.21.11.2006 ರಲ್ಲಿ ಹನುಮಂತೇಗೌಡರು ಸಿದ್ದರಾಮಯ್ಯ ಎಂಬುವವರಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿ.28.02.2008 ರಲ್ಲಿ ಸಿದ್ದರಾಮಯ್ಯ ನವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿ.19.02.2021 ರಲ್ಲಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿರಬಹುದು ಗೊತ್ತಿರುವುದಿಲ್ಲ. ಮಾರಾಟವಾದ ಬಗ್ಗೆ ಕಂಪೌಂಡ ಹಾಕಲು ಬಂದಾಗ ತಿಳಿದಿರುತ್ತದೆ.

1 ನೇ ಪ್ರತಿವಾದಿಯು ಕಂಪೌಂಡ ಹಾಕಿರುವುದಿಲ್ಲ. 2 ನೇ ಪ್ರತಿವಾದಿಯು ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಿ.30.09.1994 ರಲ್ಲಿ ಸರ್ವೇ ನಂ.161 ರಲ್ಲಿ ಚೋಟಾ ಸಾಬ್ ಎಂಬುವವರಿಗೆ ಮಂಜೂರಾತಿಯಾಗಿರುತ್ತದೆಂದರೆ ಇರಬಹುದು. ಚೋಟಾ ಸಾಬ್ ರವರು ಅವರಿಗೆ ಮಂಜೂರಾದ ಸ್ವತ್ತನ್ನು ಮಾರಾಟ ಮಾಡುವ ನಿರ್ಬಂಧನೆ ತೆರವುಗೊಂಡ ಮೇಲೆ ಅಧಿಕಾರಿಗಳಿಂದ ಪರವಾನಿಗೆ ಪಡೆದು ದಿ.13.02.2007 ರಂದು ಸಿದ್ದರಾಮಯ್ಯನವರಿಗೆ ಸ್ವತ್ತನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿರವುದಿಲ್ಲ. ದಿ.15.05.2008 ರಂದು ಸಿದ್ದರಾಮಯ್ಯನವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವ

ವಿಷಯ ಗೊತ್ತಿರುತ್ತದೆ. ದಿ.19.02.2021 ರಂದು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಕಂಪೌಂಡ ಹಾಕಲು ಬಂದಾಗ ನಾನು ಪ್ರತಿವಾದಿಯ ವಿರುದ್ದ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. 1 ನೇ ಪ್ರತಿವಾದಿ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಸರ್ವೆ ನಂ.164 ರಲ್ಲಿ 15-20 ಗುಂಟೆ ಜಾಗದ ಸ್ವಾ ಧೀನದಲ್ಲಿ ನಾನು ಇದ್ದ ಬಗ್ಗೆ ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಘೋಷಣಾತ್ಮಕ ಪರಿಹಾರ ಕೋರಿ ದಾವೆಯನ್ನು ಹೂಡಿರುವುದಿಲ್ಲ. ದಾವಾಸ್ವತ್ತಿನ ಬಿ ಶೆಡ್ಯೂಲ್ ಸ್ವತ್ತನ್ನು ದಿ.27.03.2025 ರಂದು ರಸ್ತೆಗಾಗಿ ಭೂ ಸ್ವಾಧೀನ ಅಧಿಕಾರಿಗಳು ಬಂದು ಸರ್ವೇ ಮಾಡಿಕೊಂಡು ಹೋದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**